# ಮಾಸ ಭವಿಷ್ಯ

-ಅರುಣ ಪಿ. ಭಟ್



**ಮೇಷ:** ಆಕಸ್ಮಿಕ ಧನಲಾಭ. ಕಲಾವಿದರಿಗೆ ಸಾಹಿತಿಗಳಿಗೆ ಮಾನ– ಸನ್ಮಾನ ಯೋಗ. ಅರ್ಧದಲ್ಲಿ ನಿಂತ ಕಟ್ಟಡ, ಮನೆ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವುದು. ಉದ್ಯೋಗ ವ್ಯವಹಾರಗಳಲ್ಲಿ ಉತ್ತಮ ಲಾಭ. ಒಟ್ಟಾರೆಯಾಗಿ ಸಂತಸದ ವಾತಾವರಣ ಇರುತ್ತದೆ. ಶುಭ: 14,19,29. ಅಶುಭ: 11,16,21.



**ವೃಷಭ:** ಮನೆಯಲ್ಲಿ ವಿವಾದಗಳು. ಬಂಧುಗಳಿಂದ ಕಿರಿಕಿರಿ. ಅನವಶ್ಯಕ ಖರ್ಚು. ಉನ್ನತ ಶಿಕ್ಷಣ ಮಾಡುತ್ತಿರುವವರಿಗೆ ಪ್ರಗತಿ. ವ್ಯಾಪಾರಸ್ಥರಿಗೆ ಲಾಭ. ಮಂಗಳ ಕಾರ್ಯದಲ್ಲಿ ಭಾಗಿಯಾಗುವಿರಿ ಅಥವಾ ನೀವೇ ನೆರವೇರಿಸುವಿರಿ. ಶುಭ: 5,11,23. ಅಶುಭ: 7,16, 22.



**ಮಿಥುನ:** ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು. ಸ್ವತಂತ್ರ ಉದ್ಯೋಗದಲ್ಲಿ ಉತ್ತಮ ಲಾಭ. ಮನೆಯ ಹಿರಿಯರ ಪ್ರೀತಿ, ಆಶೀರ್ವಾದ ಲಭಿಸಲಿದೆ. ಕಲಾವಿದರಿಗೆ ಸಾಹಿತಿಗಳಿಗೆ ಉತ್ತಮ. ಸಂಘ– ಸಂಸ್ಥೆಗಳಿಂದ ಧನಲಾಭ. ಶತ್ರುಗಳು ಹಿಂದೆ ಸರಿಯುವರು. ಶುಭ: 10,14,22. ಅಶುಭ: 12,18,27.



**ಕರ್ಕ:** ಪಾಲುದಾರಿಕೆ ಉದ್ಯೋಗದಲ್ಲಿ ತೊಂದರೆ ಭಿನ್ನಾಭಿಪ್ರಾಯ ತಲೆದೋರಬಹುದು. ವಿಚಿತ್ರ ಆರ್ಥಿಕ ಮುಗ್ಗಟ್ಟಿನ ತಿಂಗಳು ಇದು. ಸ್ವತಂತ್ರ ವೃತ್ತಿಪರರಿಗೆ ಲಾಭ. ಸರ್ಕಾರಿ ಉದ್ಯೋಗಿಗಳಿಗೆ ಅನಿರೀಕ್ಷಿತ ವರ್ಗ. ಮನಸ್ಸಿಗೆ ನೆಮ್ಮದಿ ಸಂತಸ. ಸೋದರರಿಂದ ಶುಭಸುದ್ದಿ. ಶುಭ: 11,16,24. ಅಶುಭ: 10,14,27.



**ಸಿಂಹ:** ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಪ್ರಗತಿ. ನಿಮ್ಮ ಆರೋಗ್ಯವು ಉತ್ತಮವಾಗಿ ಇರುತ್ತದೆ. ಹೆಚ್ಚು ಉತ್ಸಾಹ, ಸಂತೋಷದಿಂದ ಕಾಣಿಸಿಕೊಳ್ಳುತ್ತೀರಿ. ನಿಮ್ಮ ಜೀವನಶೈಲಿ ಹೆಚ್ಚಿಸಿಕೊಳ್ಳಲು ಶ್ರಮ ಹಾಕಲಿದ್ದೀರಿ. ನಿಮ್ಮ ಸಂಗಾತಿಗೆ ಉಡುಗೊರೆ ನೀಡುವ ಸಾಧ್ಯತೆ. ಶುಭ: 16,20,28. ಅಶುಭ: 13,19,23.



**ಕನ್ಯಾ:** ಯುವಜನರಿಗೆ ಉತ್ತಮ ಸಮಯ. ಹೊಸ ಯೋಜನೆ ಸಾಕಾರಗೊಳ್ಳಲಿದೆ. ಆರ್ಥಿಕ ವ್ಯವಹಾರದಲ್ಲಿ ಎಚ್ಚರಿಕೆ ಇರಲಿ. ತಾಯಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಬಾಕಿ ಹಣ ಬರಬೇಕಾಗಿದ್ದಲ್ಲಿ ಬರುವ ಅವಕಾಶ ಹೆಚ್ಚಿರುತ್ತದೆ. ಶುಭ: 12,16,26. ಅಶುಭ: 11,18,28.



**ತುಲಾ:** ವ್ಯಾಪಾರಸ್ಥರಿಗೆ ಲಾಭ. ನಿರುದ್ಯೋಗಿಗಳಿಗೆ ಉದ್ಯೋಗ ಸಾಧ್ಯತೆ. ಸಂತತಿ ಇಲ್ಲದವರಿಗೆ ಸಂತತಿಯ ಸೂಚನೆ. ವಿವಾಹಾಪೇಕ್ಷಿಗಳಿಗೆ ಸಂಗಾತಿ ಲಭ್ಯ. ಕುಟುಂಬ ಸೌಖ್ಯ. ಮನೆಗೆ ಹೊಸ ಪೀಠೋಪಕರಣ ಖರೀದಿ ಸಾಧ್ಯತೆ. ಒಟ್ಟಾರೆಯಾಗಿ ಶುಭ. ಶುಭ: 12,18,24. ಅಶುಭ: 13,19,27.



**ವೃಶ್ಚಿಕ:** ಈಗ ಮಾಡುತ್ತಿರುವುದಕ್ಕಿಂತ ಉತ್ತಮವಾಗಿ ಕೆಲಸ ಮಾಡಲು ಪ್ರಯತ್ನಿಸುತ್ತೀರಿ. ಹಲವು ಸವಾಲು ಏಕಕಾಲಕ್ಕೆ ಎದುರಾಗುತ್ತದೆ. ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ. ತಿಂಗಳ ಮಧ್ಯಭಾಗದಲ್ಲಿ ವ್ಯಾಪಾರ ಉದ್ಯಮ ವಿಸ್ತರಣೆಗೆ ಹೆಚ್ಚಿನ ಅವಕಾಶ. ಶುಭ: 10,14,27. ಅಶುಭ: 12,16,23.



**ಧನು:** ಬಿಡುವಿಲ್ಲದ ಉದ್ಯೋಗದ ಮಧ್ಯೆಯೂ ಕುಟುಂಬ ಜೀವನಕ್ಕೆ ಹೆಚ್ಚಿನ ಸಮಯ ಇಡಬೇಕಾಗುತ್ತದೆ. ವ್ಯಾಪಾರ, ವೈಯಕ್ತಿಕ ವಿಚಾರಗಳಲ್ಲಿ ಸವಾಲುಗಳು ಎದುರಾಗುತ್ತವೆ. ಇದರಿಂದ ವೈಯಕ್ತಿಕವಾಗಿ ಚಿಂತೆ ಎದುರಾಗುತ್ತದೆ. ನೆಗಡಿ, ಕೆಮ್ಮು, ತಲೆನೋವು ಕಾಡಬಹುದು. ಶುಭ: 15,18,28. ಅಶುಭ: 12,16,29.



**ಮಕರ:** ಮನೆಗೆ ಹಳೆಯ ಮಿತ್ರರ ಆಗಮನ. ಆದಾಯಕ್ಕೆ ಸಂಬಂಧಿಸಿದ ಮೂಲಗಳಿಂದ ಲಾಭ. ಇದರಿಂದ ಹೆಚ್ಚು ಉತ್ಸಾಹಭರಿತರಾಗಿ ಕಾಣಿಸಿಕೊಳ್ಳಲಿದ್ದೀರಿ. ವಿದ್ಯಾರ್ಥಿಗಳಿಗೆ ಯಶಸ್ಸು ದೊರೆಯಲಿದೆ. ಮಕ್ಕಳ ಮದುವೆಯ ವಿಚಾರವನ್ನು ಅಂತಿಮಗೊಳಿಸುವಿರಿ. ಶುಭ: 19,22,29. ಅಶುಭ: 12,16,21.



**ಕುಂಭ:** ಹೊಸ ಉತ್ಸಾಹದಿಂದ ಪುಟಿಯಲಿದ್ದೀರಿ. ಪಾರ್ಟ್‌ನರ್‌ಶಿಪ್ ವ್ಯವಹಾರ ಮಾಡುತ್ತಿರುವವರಿಗೆ ಹೊಸ ಅವಕಾಶ ದೊರೆಯಲಿದೆ. ಆರೋಗ್ಯದಲ್ಲಿ ಸ್ವಲ್ಪಮಟ್ಟಿಗೆ ಏರುಪೇರುಗಳಾಗಬಹುದು. ಪಿತ್ರಾರ್ಜಿತ ಆಸ್ತಿ ಹಂಚಿಕೆ ವಿಚಾರದಲ್ಲಿ ಒಡಹುಟ್ಟಿದವರ ಜತೆ ಸಂಘರ್ಷ ಸಾಧ್ಯತೆ.ಶುಭ: 15,18,26. ಅಶುಭ: 14,19,23.



**ಮೀನ:** ನೀವು ಹಾಕಿದ ಶ್ರಮಕ್ಕೆ ಅತ್ಯುತ್ತಮ ಫಲಿತಾಂಶ ದೊರೆಯಲು ಆರಂಭ ಆಗುತ್ತದೆ. ನಿಮ್ಮ ಆರೋಗ್ಯ ಉತ್ತಮವಾಗಿರುತ್ತದೆ. ಆತ್ಮವಿಶ್ವಾಸ ಹೆಚ್ಚುತ್ತದೆ. ಹಣಕಾಸಿನ ಹರಿವು ಹೆಚ್ಚಳವಾಗಲಿದೆ. ಸಂಬಂಧಗಳು ಸುಮಧುರವಾಗಿರುತ್ತವೆ. ಸಂಗಾತಿ ಜತೆಗೆ ಸಿಟ್ಟಾಗಲಿದ್ದೀರಿ. ಶುಭ: 16,20,27. ಅಶುಭ: 12,26,29.